# ತತ್ತ್ವಜಿಜ್ಞಾಸೆಯಿಂದ ಧರ್ಮಜಿಜ್ಞಾಸೆಯೆಡೆಗೆ

ಡಾ. ಪ್ರಭುಶಂಕರ

ತನ್ನ ಸುತ್ತಣ ಜಗತ್ತಿಗೆ ಕಣ್ಣು ತೆರೆಯುವ ಪ್ರತಿಯೊಬ್ಬ ಪ್ರಜ್ಞಾವಂತ ಮಾನವನನ್ನೂ ಅನೇಕಾನೇಕ ಪ್ರಶ್ನೆಗಳು ಕಾಡತೊಡಗುತ್ತವೆ. ಅವನ ಬುದ್ಧಿ ಎಚ್ಚೆತ್ತು ಸದಾ ಕೆಲಸ ಮಾಡುತ್ತಲೇ ಇರುವುದರಿಂದ ಅವನು ಉತ್ತರಗಳನ್ನು ಹುಡುಕುತ್ತಲೇ ಇರುತ್ತಾನೆ. ತನ್ನನ್ನು ಕಾಡುತ್ತಿರುವ ಪ್ರಶ್ನೆಗಳಿಗೆ ವ್ಯಕ್ತಿ ತನ್ನ ಕೆಲಸಗಳನ್ನು ಬಿಟ್ಟು, ಏಕಾಂತದಲ್ಲಿ ಕುಳಿತು ಅಥವಾ ಗುರುವೊಬ್ಬನನ್ನು ಆಶ್ರಯಿಸಿ ಉತ್ತರಗಳನ್ನು ಪಡೆದುಕೊಳ್ಳಬೇಕು ಎಂದೇನಿಲ್ಲ. ಆ ಕೆಲಸ ಮಾಡುತ್ತಿರುವಾಗಲೇ, ಸಂಸಾರ ಅಥವಾ ಸಂನ್ಯಾಸ ಜೀವನವನ್ನು ನಡೆಸುತ್ತಿರುವಾಗಲೇ ಉತ್ತರಗಳನ್ನು ಹುಡುಕುತ್ತಿರುವುದೂ ಸಾಧ್ಯ. ಅಂತಹ ಪ್ರಶ್ನೆಗಳು ಯಾವುವು ಎಂಬುದನ್ನು ನಾವೀಗ ನೋಡೋಣ.

### ೧. ಸೃಷ್ಟಿಯ ಸ್ವರೂಪ ಎಂಥದು?

ಈ ವಿಶ್ವದ ಅಥವಾ ಸೃಷ್ಟಿಯ ಸ್ವರೂಪ ಎಂಥದು? ವಿವರವಾಗಿ ಹೇಳಬೇಕಾದರೆ ನಾವು ವಾಸಿಸುತ್ತಿರುವ ಭೂಮಿ, ನಾವು ಕಾಣುತ್ತಿರುವ ಸೂರ್ಯ ಚಂದ್ರ ಗ್ರಹ ನಕ್ಷತ್ರಾದಿಗಳು, ಹರಿಯುತ್ತಿರುವ ನದಿಗಳು, ಮೊರೆಯುತ್ತಿರುವ ಕಡಲುಗಳು, ಮುಗಿಲನ್ನು ಮುಡಿದಿರುವ ಗುಡ್ಡ, ಬೆಟ್ಟ, ಪರ್ವತಗಳು, ಈ ಭೂಮಿಗೆ ಹಸಿರಿನ ಶೋಭೆಯನ್ನು ನೀಡಿರುವ ಗಿಡ, ಮರ, ಬಳ್ಳಿಗಳು, ನಮ್ಮ ಪರಿಸರವನ್ನು ನಾದಮಯಗೊಳಿಸಿರುವ ಹಕ್ಕಿಗಳು, ಪರಿಸರವನ್ನು ನಾಶಮಾಡುತ್ತಿರುವ – ಉಳಿಸಬೇಕೆಂದು ಹಾತೊರೆಯುತ್ತಿರುವ ಮನುಷ್ಯರು, ಸಾಧು ಮತ್ತು ಕ್ರೂರ ಪ್ರಾಣಿಗಳು – ಇತ್ಯಾದಿ ಇತ್ಯಾದಿಗಳು ಅಸ್ತಿತ್ವಕ್ಕೆ ಬಂದದ್ದು ಹೇಗೆ? ಹೆಚ್ಚು ಕಡಮೆ ಎಲ್ಲ ಧರ್ಮಗಳೂ ಹೇಳುವಂತೆ ಒಬ್ಬ ಸೃಷ್ಟಿಕರ್ತ ಇವನ್ನು ಸೃಷ್ಟಿಸಿದನೆ? ಅಥವಾ ವಿಕಾಸವಾದವು ಸಾಧಿಸಿ ತೋರಿಸಿರುವಂತೆ ಇವೆಲ್ಲ ಲಕ್ಷಾಂತರ ವರ್ಷಗಳ ಅವಧಿಯಲ್ಲಿ ವಿಕಾಸಗೊಂಡಿವೆಯೆ? ಒಬ್ಬ ಭಗವಂತ ಸೃಷ್ಟಿಸಿದ್ದರೆ ಈ ಸೃಷ್ಟಿಯಲ್ಲಿ ಇಷ್ಟು ಅನ್ಯಾಯ, ಅಸಮಾನತೆ, ಹಿಂಸೆ, ಕ್ರೌರ್ಯ, ರಕ್ತಪಾತ, ಹಸಿವು, ದಾರಿದ್ರ್ಯ ಏಕಿವೆ? ಅವನ್ನೆಲ್ಲ ಸೃಷ್ಟಿಸಿರುವ ಭಗವಂತ ಹಿಂಸಾಸುಖಿಯೇ? ಅಥವಾ ಇವೆಲ್ಲ ವಿಕಾಸವಾಗಿದ್ದರೆ ಯಾವ ಮೂಲಭೂತ ಅಂಶದಿಂದ ಇವು ವಿಕಾಸವಾಗಿವೆ? ಸೃಷ್ಟಿಯ ವಿಕಾಸಕ್ಕೆ ಒಂದು ಉದ್ದೇಶ ಇದೆಯೆ? ಅಥವಾ ಸೃಷ್ಟಿ ವಿಕಾಸಗಳೂ ಉದ್ದೇಶರಹಿತವಾದವೆ? ಉದ್ದೇಶ ಇದ್ದರೆ ಅದೇನು?

### ೨. ವಿಶ್ವದಲ್ಲಿ ಮಾನವನ ಸ್ಥಾನ ಏನು?

ಈ ವಿಶ್ವದಲ್ಲಿ ಮಾನವನ ಸ್ಥಾನ ಏನು? ಬೆಳೆಯುತ್ತಿರುವ,



ವಿಕಾಸಗೊಳ್ಳುತ್ತಿರುವ ವಿಶ್ವದ ಮಕುಟಮಣಿಯೆ ಇವನು? ಮನುಷ್ಯನು ತಾನೇ ಭಾವಿಸಿರುವಂತೆ ಸಚರಾಚರ ಸೃಷ್ಟಿಯ ಸಮಸ್ತ ಸ್ಥಿರ, ಚರ, ಜಡ, ಜೀವಭೂತಗಳಲ್ಲೆಲ್ಲ ಅತ್ಯುತ್ತಮ ಜೀವವಿಶೇಷವೇ? ಅದು ಹೌದೆಂದರೆ ಈ ವಿಷಯದಲ್ಲಿ ಇತರ ಪ್ರಾಣಿಗಳ ಅಭಿಪ್ರಾಯ ಏನು? ಅಥವಾ ಅಂತಹ ಅಭಿಪ್ರಾಯವನ್ನು ತಿಳಿಯಲು ಯಾವುದೇ ರೀತಿಯ ಸಾಧ್ಯತೆಯೂ ಇಲ್ಲವೆ? – ಹೋಗಲಿ, ಮನುಷ್ಯಪ್ರಾಣಿ ಸೃಷ್ಟಿಯ ಕಿರೀಟವಲ್ಲದಿದ್ದರೆ ಮೇರೆಯೇ ಇಲ್ಲದ ಅಗಾಧವಾದ ಆಕಾಶದಲ್ಲಿ (Space) ಒಂದು ಧೂಳಿನ ಕಣ ಮಾತ್ರವೇ? ವಿಶ್ವವು ಇಂಥ ಶಕ್ತಿ ಮತ್ತು ಬುದ್ಧಿಮತ್ತೆಗಳ ಕೇಂದ್ರವಾದ ಈ ಮಾನವ ಪ್ರಾಣಿಯನ್ನು ಗಣನೆಗೆ ತಂದುಕೊಂಡಿದೆಯೆ? ಅಥವಾ ಇವನು ವಿಶಾಲವಾದ ಸಮುದ್ರ ತೀರದ ಮರಳಿನ ಹರವಿನಲ್ಲಿ ಒಂದು ಕಣ ಮಾತ್ರವೇ? ಮಾನವನು ತನಗೆ ಇಷ್ಟ ಬಂದಂತೆ ಈ ವಿಶ್ವವನ್ನು ರೂಪಿಸಬಲ್ಲನೆ? ಅಥವಾ ಈ ವಿಶ್ವವೇ – ತನ್ನ ವಿಕಾಸಕ್ರಮದಲ್ಲಿ – ಅನೇಕಾನೇಕ ಸಸ್ಯವರ್ಗವನ್ನೂ ಪ್ರಾಣಿವರ್ಗವನ್ನೂ, ಯಾವ ಪಶ್ಚಾತ್ತಾಪವೂ ಇಲ್ಲದೆ ನಾಶಮಾಡಿರುವಂತೆ ಇವನನ್ನೂ ನಾಶಮಾಡಿ ಕೈ ತೊಳೆದುಕೊಂಡು ಪ್ರಳಯದಲ್ಲಿ ಪರ್ಯವಸಾನಗೊಳ್ಳುತ್ತದೆಯೋ? ಅಥವಾ ಮತ್ತೊಂದು ಸೃಷ್ಟಿಯ, ವಿಕಾಸಕ್ರಮದ ಅಧ್ಯಾಯವನ್ನು ಪ್ರಾರಂಭ ಮಾಡುತ್ತದೆಯೋ?

### ೩. ಪುಣ್ಯ–ಪಾಪಗಳೆಂದರೇನು?

ಪುಣ್ಯ ಎಂದರೇನು? ಪಾಪ ಎಂದರೇನು? ಇದು ಪುಣ್ಯ ಇದು ಪಾಪ ಎಂದು ನಿರ್ಧಾರವಾದುದ್ದು ಹೇಗೆ? ಅನೇಕ ಧರ್ಮಗಳು ನಂಬಿರುವಂತೆ ಸೃಷ್ಟಿಕರ್ತನೋ ಅಥವಾ ಮತಸ್ಥಾಪಕನೋ ಅವುಗಳನ್ನು ನಿರ್ಧರಿಸಿದ್ದಾನೆಯೇ? ಇವುಗಳ ಕಲ್ಪನೆ ಸಾರ್ವಕಾಲಿಕವೋ ಇಲ್ಲವೆ ಕಾಲದಿಂದ ಕಾಲಕ್ಕೆ ಬದಲಾಗುವಂಥದೋ? ಸ್ವರ್ಗ ನರಕಗಳಲ್ಲಿ ವಾಸಿಸಬೇಕಾಗಿ ಬರುವ ಜೀವಿಗಳು ಶಾಶ್ವತವಾಗಿ ಅಲ್ಲೇ ಇರುತ್ತವೆಯೋ, ಇಲ್ಲವೇ, ಅವಕ್ಕೆ ಒಂದರಿಂದ ಇನ್ನೊಂದಕ್ಕೆ ವರ್ಗಾವಣೆ ಉಂಟೋ? ಕಾಲದಲ್ಲಿ ತಮ್ಮ ಉಗಮದ ಅಸ್ತಿತ್ವವನ್ನು ಹೊಂದಿರುವ – ಎಂದರೆ ಕ್ರಿಪೂ. ಒಂದರಲ್ಲೋ ಕ್ರಿಶ. ಹನ್ನೆರಡನೆಯ ಶತಮಾನದಲ್ಲೋ ಅಸ್ತಿತ್ವಕ್ಕೆ ಬಂದಿರುವ ಧರ್ಮಗಳಿವೆಯಲ್ಲ, ಇವು ನಿರ್ಣಯಿಸುವ ಸ್ವರ್ಗನರಕಗಳು ಜೀವಿಗಳಿಗೆ ಆ ಕಾಲಬಿಂದುವಿನಿಂದ ಪ್ರಾಪ್ತವಾಗುವುದಾದರೆ, ಆ ಕಾಲಕ್ಕಿಂತ ಹಿಂದೆ ಗತಿಸಿದ ಜೀವಿಗಳು ಸ್ವರ್ಗಕ್ಕೋ ನರಕಕ್ಕೋ ಹೋಗುತ್ತಿದ್ದುದು ಯಾವ ಮಾನದಂಡದಿಂದ? ಇದೊಂದು ಜಟಿಲವಾದ ಸಮಸ್ಯೆ ಅಲ್ಲವೆ?

### ೪. ಭಗವಂತನ ಸ್ವರೂಪ

ಭಗವಂತನ ಸ್ವರೂಪ ಏನು? ಮೊದಲನೆಯದಾಗಿ ಅವನು ನಿರಾಕಾರನೆ ಅಥವಾ ಸಾಕಾರನೆ? ಅಥವಾ ಕೆಲವು ಧಾರ್ಮಿಕ ಪುರುಷರು ವಾದಿಸುವಂತೆ ಅವನು ಎರಡೂ ಆಗಿದ್ದಾನೆಯೇ? ಅವನು ಸಾಕಾರನಾಗಿದ್ದರೆ, ಬಹುಮಟ್ಟಿಗೆ ಮಾನವನೇ ಆಗಿದ್ದಾನೆ ಏಕೆ? ಅಥವಾ ಅವತಾರ ಕಲ್ಪನೆಗಳಿರುವ ಧರ್ಮಗಳಲ್ಲಿರುವಂತೆ ಅವನು ಮಾನವ ಹಾಗೂ ಮೃಗ ಎರಡು ರೂಪಗಳನ್ನು ತಾಳುತ್ತಾನೆಯೆ? ಇದ್ದರೆ, ಆಯಾ ಸಂದರ್ಭಗಳಲ್ಲಿ ಮನುಷ್ಯತ್ವವೋ ಮೃಗತ್ವವೋ ಹೆಚ್ಚಿನ ಅನುಪಾತದಲ್ಲಿದ್ದರೆ ಅವನಿಂದ ಶಿಕ್ಷೆಯನ್ನೋ ರಕ್ಷಣೆಯನ್ನೋ ಪಡೆಯುವ ಜೀವಿಗೆ ನ್ಯಾಯವು ಸರಿಯಾದ ಪ್ರಮಾಣದಲ್ಲಿ ದೊರೆಯುತ್ತದೆಯೇ? ಸ್ವರ್ಗ ನರಕಗಳು ಎಲ್ಲಿ ಸ್ಥಾಪಿತವಾಗಿವೆ? ಇದುವರೆಗೆ ವಿಜ್ಞಾನವು ಶೋಧಿಸಿ ಪ್ರಕಟಿಸಿರುವ ದೇಶದ (Space) ಆಚೆಗೋ, ಈಚೆಗೋ ಅವು ಇರುವುದಾದರೆ, ಯಾವನೇ ಆಧ್ಯಾತ್ಮಿಕ ಪುರುಷನೋ, ಮತಸ್ಥಾಪಕನೋ ಅಲ್ಲಿದ್ದು ಬಂದು ಅವನ್ನು ತನ್ನ ಸ್ವಂತ ಅನುಭವದಿಂದ ವರ್ಣಿಸಿರುವ ವರದಿಗಳು ಏಕಿಲ್ಲ? ಇದ್ದರೆ ಅವುಗಳ ಪ್ರಾಮಾಣ್ಯವನ್ನು ತಾಳೆ ನೋಡಲು ಇರುವ ಆಧಾರಗಳೇನು?

ದೇವರು ಮಾನವನ ಪ್ರತಿರೂಪದಂತೆಯೇ ಇದ್ದಾನೆ ಎಂದು ಅನೇಕ ಧರ್ಮಗಳು ಚಿತ್ರಿಸಿವೆಯಷ್ಟೆ? ಹಾಗಿದ್ದರೆ ಅವನ ಶಾಪಾನುಗ್ರಹಗಳು ಮಾನವಸ್ವಭಾವದ ಪ್ರತಿರೂಪವಾಗಿದ್ದು ನ್ಯಾಯದ ವಿಷಯದಲ್ಲಿ ಪೂರ್ವಾಗ್ರಹಗಳಿಂದ ಕೂಡಿದವಾಗಿರುವುದಿಲ್ಲವೆ? ಹಾಗಿರುವಾಗ ಶಾಪವನ್ನೋ ಅನುಗ್ರಹವನ್ನೋ ಪಡೆಯುವವನು ತಾನು ಮಾಡುವ–ಮನಸೋ ಇಚ್ಛೆಯಿಂದ, ಇದು ಪಾಪ, ಇದು ಪುಣ್ಯ ಎಂದು ನಿರ್ಧರಿತವಾಗಿರುವ ಪಾಪಪುಣ್ಯಗಳಿಗೆ ಅನುಗುಣವಾಗಿ ಪಡೆಯುತ್ತಾನೆ ಎಂಬುದಕ್ಕೆ ಖಾತ್ರಿ ಏನು?

ದೇವರು ಸರ್ವಶಕ್ತನೂ, ಸರ್ವಜ್ಞನೂ, ಸಮದರ್ಶಿಯೂ ಆಗಿದ್ದರೆ ಈ ಜಗತ್ತಿನಲ್ಲಿ ನಡೆಯುತ್ತಿರುವ ಅನ್ಯಾಯ, ಅನಾಹುತಗಳನ್ನು ನಿವಾರಿಸುತ್ತಿಲ್ಲ ಏಕೆ? ಅವನಿಗೂ ಅಥವಾ ಆ ಶಕ್ತಿಗೂ ಈ ಜಗತ್ತಿಗೂ ಇಲ್ಲಿನ ಘಟನೆಗಳಿಗೂ ಯಾವುದೇ ರೀತಿಯ ಸಂಬಂಧಗಳೂ ಇಲ್ಲವೆ? ಅವನು ನಿಷ್ಕರುಣ ಮೂರ್ತಿಯೇ?

> ನಾನು ಆರು ಜನ ಪ್ರಾಮಾಣಿಕ ಸೇವಕರನ್ನು ನನ್ನ ಬಳಿಯಲ್ಲಿಟ್ಟುಕೊಳ್ಳುತ್ತೇನೆ. (ಅವರು ನನಗೆ ಈಗ ಗೊತ್ತಿರುವುದನ್ನೆಲ್ಲ ಕಲಿಸಿದವರು) ಅವರೆಂದರೆ,
>
> **ಏನು? – ಏಕೆ? – ಯಾವಾಗ?**
>
> **ಹೇಗೆ? – ಎಲ್ಲಿ? – ಯಾರು?**
>
> *– ಕಿಪ್ಲಿಂಗ್*

### ೫. ವಿಧಿ ಮತ್ತು ಇಚ್ಛಾಸ್ವಾತಂತ್ರ್ಯಗಳ ಸಂಬಂಧವೇನು?

ವಿಧಿ ಮತ್ತು ಇಚ್ಛಾಸ್ವಾತಂತ್ರ್ಯಗಳ ಸಂಬಂಧವೇನು? ಮಾನವರು ತಮಗೆ ಇಷ್ಟ ಬಂದದ್ದನ್ನು, ಇಷ್ಟ ಬಂದಾಗ ಮಾಡಬಹುದೆ? ಅಥವಾ ಸರ್ವಶಕ್ತ ಎಂದು ಭಾವಿಸಲಾಗಿರುವ 'ವಿಧಿ'ಯು ಮಾನವನ, ಮಾನವೇತರರ ಎಲ್ಲ ಕ್ರಿಯೆಗಳನ್ನೂ ಕಟ್ಟುನಿಟ್ಟಾಗಿ ನಿಯಂತ್ರಿಸುತ್ತಿದೆಯೆ? ಆ ವಿಧಿನಿಯಂತ್ರಣದ ಮೇಲೆ ಮಾನವಜೀವಿಗೆ ಯಾವುದೇ ರೀತಿಯ ನಿಯಂತ್ರಣ ಇಲ್ಲವೆ?

ನಾಳೆ ಏನು ಮಾಡಬಹುದು ಎಂಬುದನ್ನು ಈಗಲೇ ನಾವು ನಿರ್ಧರಿಸಬಹುದೇ? ಅಥವಾ ಪ್ರತಿಯೊಂದು ದಿನದ, ಪ್ರತಿಯೊಂದು ಕ್ಷಣದ ಘಟನೆಗಳೆಲ್ಲ ಪೂರ್ವನಿರ್ಧಾರಿತವೆ? ಹಾಗಿದ್ದಲ್ಲಿ ಮನುಷ್ಯ ಪ್ರಯತ್ನಕ್ಕೆ ಯಾವುದೇ ಬೆಲೆಯೂ ಇಲ್ಲವೆ? ಒಂದು ಘಟನೆಯಲ್ಲಿ ವಿಧಿಯ ಪೂರ್ವ ನಿರ್ಧಾರ ಮತ್ತು ಪುರುಷಪ್ರಯತ್ನ ಇವುಗಳ ಪರಿಮಾಣ (ratio) ಎಷ್ಟು? ಒಂದು ವೇಳೆ ಎಲ್ಲವೂ ಪೂರ್ವನಿರ್ಧಾರಿತವಾಗಿದ್ದರೆ ಮನುಷ್ಯ ಏನೇ ಮಾಡಲಿ ಬಿಡಲಿ, ಎಲ್ಲ ಘಟನೆಗಳೂ ತಮಗೆ ತಾವೇ, ಸ್ವಯಂಚಾಲಿತವಾಗಿ (automatic) ನಡೆದುಹೋಗಬೇಕಲ್ಲವೆ?

### ೬. ಆತ್ಮ ಎಂದರೇನು?

ಮುಂದಿನದು ಆತ್ಮದ ಪ್ರಶ್ನೆ. ಆತ್ಮ ಎಂದರೇನು? ಜೀವ ಮತ್ತು ಆತ್ಮ ಸಮಾನಾರ್ಥಕ ಪದಗಳೇ? ದೇಹ ನಾಶವಾದ ಮೇಲೆ ಮಾಯವಾಗಿ ಹೋಗುವುದು ಜೀವವೆ, ಆತ್ಮವೆ? ಹಾಗೆ ಮಾಯವಾದ ಆತ್ಮ ಎಲ್ಲಿಗೆ ಹೋಗುತ್ತದೆ? ತನ್ನ ಕರ್ಮಫಲಾನುಗುಣವಾಗಿ, ಅದು ಸ್ವರ್ಗಕ್ಕೋ ನರಕಕ್ಕೋ ಹೋಗುತ್ತದೆ ಎಂದಾದರೆ ಅಲ್ಲಿ ಅದು ಎಷ್ಟು ಕಾಲ ಇರುತ್ತದೆ? ಕೆಲವು ಸಿದ್ಧಾಂತಗಳು ಪಾಪಮಾಡಿದ ಜೀವಿಗಳಿಗೆ ನಿತ್ಯನರಕವನ್ನು ದಯಪಾಲಿಸುತ್ತವೆ. ಹೀಗೆ ಅನಂತಕಾಲ ನರಕದಲ್ಲೇ ವಾಸಮಾಡುತ್ತಿರುವ ಜೀವಿಗಳ ವಿಷಯದಲ್ಲಿ ಅಪಾರ ದಯಾಮಯನಾದ ಸೃಷ್ಟಿಕರ್ತನು ಕರುಣೆ

**ತನ್ನ ಯುಕ್ತಿಯನ್ನು ಉಪಯೋಗಿಸಿ ಯಾವ ನಿರ್ಧಾರಕ್ಕೂ ಬರಲಾರದ ನಂಬಲಾರದ ಮಾನವನನ್ನು ಬೇಕಾದರೆ ದೇವರು ಮೆಚ್ಚಿಯಾನು. ಆದರೆ ಯುಕ್ತಿ ಎಂಬ ಅವನ ವರವನ್ನು ನಿರಾಕರಿಸಿ ಸುಮ್ಮನೆ ನಂಬುವವನನ್ನು ಅವನು ಮೆಚ್ಚಲಾರನೆಂದು ಭಾವಿಸುತ್ತೇನೆ.... ನಾವು ವಿಚಾರ ಮಾಡಬೇಕು. ಪ್ರತಿಯೊಂದು ದೇಶದಲ್ಲಿಯೂ ಹಿಂದಿನ ಶಾಸ್ತ್ರಗಳಲ್ಲಿ ಬರುವ ಮಹಾತ್ಮರು ಸಾಧುಸಂತರು ಹೇಳುವುದು ಸತ್ಯ ಎಂದು ಯುಕ್ತಿ ಒಪ್ಪಿಕೊಂಡರೆ ಆಗ ನಾವು ಅವರನ್ನು ನಂಬುತ್ತೇವೆ. ನಮ್ಮಲ್ಲಿಯೇ ಅಂತಹ ಮಹಾತ್ಮರನ್ನು ನೋಡಿದಾಗ ನಾವು ನಂಬುತ್ತೇವೆ. ಆಗ ಅವರು ವಿಶಿಷ್ಟ ವ್ಯಕ್ತಿಗಳಲ್ಲ, ಕೆಲವು ತತ್ತ್ವಗಳ ಪ್ರತಿನಿಧಿಗಳು ಎಂಬುದು ಗೊತ್ತಾಗುತ್ತದೆ.**

–ಸ್ವಾಮಿ ವಿವೇಕಾನಂದ **(ಕೃ.ಶ್ರೀ.೬.೩೬೯)**

ತೋರಿಸುವ ಸಂಭವ ಇಲ್ಲವೇ ಇಲ್ಲವೆ? ಒಂದೇ ದೇಹದಲ್ಲಿ ಜೀವ ಮತ್ತು ಆತ್ಮ ಎರಡೂ ವಾಸಿಸುತ್ತಿದೆ ಎಂದಾದರೆ ಅವುಗಳ ಪರಸ್ಪರ ಸಂಬಂಧ ಏನು? ಜೀವವು ದೇಹವನ್ನು ಬಿಟ್ಟಾಗ ಆತ್ಮ ಏನು ಮಾಡುತ್ತದೆ?

**೭. ಮಾನವ ಮತ್ತು ಆಡಳಿತಗಳ ಸಂಬಂಧ ಹೇಗಿರಬೇಕು?**

ಮಾನವ ಮತ್ತು ಆಡಳಿತ ಇವುಗಳಿಗೆ ಸಂಬಂಧಿಸಿದ್ದು ಮುಂದಿನ ಪ್ರಶ್ನಾವಳಿ. ಮನುಷ್ಯರನ್ನು ಆಳಲು ದೇವರೇ ರಾಜರುಗಳನ್ನು ಸೃಷ್ಟಿಸಿದ್ದಾನೆ ಎಂಬ ನಂಬಿಕೆ ಅನೇಕ ಧರ್ಮಗಳಲ್ಲಿ ಇತ್ತು. ರಾಜನೇ ಪ್ರತ್ಯಕ್ಷ ದೇವತೆ ಎಂದೂ ಹೇಳಲಾಗುತ್ತಿತ್ತು. ದೈವನಿಯಮ ಎಂಬುದಕ್ಕೆ ಪರ್ಯಾಯವಾಗಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಾಗ, ರಾಜರುಗಳ ರುಂಡಗಳನ್ನು ಬೇರೆ ರಾಜರುಗಳೋ ಪ್ರಜೆಗಳೋ ಉರುಳಿಸಿದಾಗ, ರಾಜರ ಅಧಿಕಾರವನ್ನು ಧರ್ಮಗುರುಗಳು ಕಬಳಿಸಲು ಯತ್ನಿಸಿದಾಗ, ರಾಜರುಗಳ ಪ್ರತ್ಯಕ್ಷ ದೇವತಾ ಸ್ವರೂಪಕ್ಕೂ ತಾನೇ ಸೃಷ್ಟಿಸಿದ ತನ್ನ ಪ್ರತಿನಿಧಿಗಳನ್ನು ದೇವರು ರಕ್ಷಿಸುತ್ತಾನೆ ಎಂಬ ನಂಬಿಕೆಗೂ ಧಕ್ಕೆ ಒದಗಲಿಲ್ಲವೆ? ಈಗಿನ ಪ್ರಜಾಪ್ರಭುತ್ವ ಪದ್ಧತಿಗೆ ದೇವರ ಒಪ್ಪಿಗೆ ಇದೆಯೆ? ಇದ್ದರೆ, ತನ್ನ ಶತ್ರುವಾದ ಸೈತಾನನು ಹೆಚ್ಚಿನ ಮಂದಿ ಪ್ರಜಾಪ್ರತಿನಿಧಿಗಳ ಮನಸ್ಸನ್ನು ಆಳುತ್ತಿರುವುದನ್ನು ತಡೆಯಲು ಸರ್ವಶಕ್ತನಾದ ಭಗವಂತನು ಯಾವುದೇ ಕ್ರಮವನ್ನೂ ಕೈಗೊಳ್ಳುವುದಿಲ್ಲವೆ? ಭಗವಂತನ ಪ್ರತಿನಿಧಿಗಳ ವಿರುದ್ಧ ಹೋರಾಡಲು ಹುಲು ಮಾನವರಿಗೆ ಸ್ವಾತಂತ್ರವುಂಟೆ? ಅತ್ಯುತ್ತಮ ಆಡಳಿತ ಯಂತ್ರದ ಸ್ವರೂಪ ಎಂಥದು?

**೮. ಶಿಕ್ಷಣ ಎಂದರೆ ಏನು?**

ಮುಂದಿನದು ಮಾನವ ಮತ್ತು ಶಿಕ್ಷಣ ವ್ಯವಸ್ಥೆಯ ಪ್ರಶ್ನೆ. ಶಿಕ್ಷಣ ಎಂದರೆ ಏನು? ಮಾನವನ ಮೂಲಭೂತ ಸ್ವಭಾವವನ್ನು ಬದಲಿಸುವ ಶಿಕ್ಷಣ ಇದೆಯೆ? ಶಿಕ್ಷಣದ ಸ್ವರೂಪ ಹೇಗಿರಬೇಕು ಎಂಬುದನ್ನು ನಿರ್ಧರಿಸುವವರು ಯಾರು? ಶಿಕ್ಷಣವು ಸಮಾಜದ ಎಲ್ಲ ಸ್ತರಗಳ ಜನರಿಗೂ ಏಕರೂಪವಾಗಿರಬೇಕಲ್ಲವೆ? ಒಂದೊಂದು ಸ್ತರದ ಜನರಿಗೆ ಒಂದೊಂದು ಮಟ್ಟದ ಶಿಕ್ಷಣವನ್ನು ನೀಡಿ ಏಕರೂಪ ಸಮಾಜವನ್ನು ನಿರ್ಮಾಣ ಮಾಡುವುದು ಹೇಗೆ? **ಶಿಕ್ಷಣವು ಜನರನ್ನು ಮುಕ್ತ ಚಿಂತಕರನ್ನಾಗಿ ಮಾಡುತ್ತಿದೆಯೆ? ಅವರ ಮೇಲೆ ಪರಂಪರೆ ಎಂಬ ಹೆಸರಿನಲ್ಲಿ ಮಣಗಟ್ಟಲೆ ಮೂಢ ನಂಬಿಕೆಗಳನ್ನು ಹೇರಿ ಚಿಂತಕರ, ಸಂಶೋಧಕರ, ವಿಜ್ಞಾನಿಗಳ ನಾಡೊಂದನ್ನು ಸೃಷ್ಟಿಸುವ ಪ್ರಯತ್ನ ಮರುಮರೀಚಿಕೆಯಲ್ಲವೆ?**

**೯. ನಿಯಂತ್ರಕರು ಯಾರು, ಬುದ್ಧಿಯೋ ಹಾಗೂ ಭೌತದ್ರವ್ಯವೋ?**

ಇನ್ನು ಮನಸ್ಸು ಅಥವಾ ಬುದ್ಧಿ ಹಾಗೂ ಭೌತದ್ರವ್ಯ ಇವುಗಳ ಪರಿಶೀಲನೆ. ಬುದ್ಧಿಯು (mind) ಭೌತದ್ರವ್ಯದಿಂದ (matter) ಪ್ರಭಾವಿತವಾಗುತ್ತದೆಯೇ ಅಥವಾ ಭೌತದ್ರವ್ಯವು ಬುದ್ಧಿಯನ್ನು ನಿಯಂತ್ರಿಸುತ್ತದೆಯೇ? ಭೌತದ್ರವ್ಯ ಎಂಬುದು ಬುದ್ಧಿಯ ಸೃಷ್ಟಿಯೇ ಅಥವಾ ಬುದ್ಧಿಯೇ ಭೌತದ್ರವ್ಯದ ಮತ್ತೊಂದು ಸ್ವರೂಪವೆ? ಬುದ್ಧಿಯು ಭೌತದ್ರವ್ಯದಿಂದ ಬೇರೆಯಾಗಿದ್ದೂ ಅದಕ್ಕಿಂತ ಶ್ರೇಷ್ಠವಾಗಿದೆಯೆ? ಅಥವಾ ಅದು, ಎಂದಾದರೂ ನಾಶವಾಗಲೇಬೇಕಾದ ಭೌತದ್ರವ್ಯದ ಭಾಗವಾಗಿದೆಯೇ? ಜಗತ್ತಿನ ಎಲ್ಲ ಇಷ್ಟಾನಿಷ್ಟಗಳಿಗೂ ಭೌತದ್ರವ್ಯವೇ ಕಾರಣವೆ?

**೧೦. ಭಾವನೆಗಳು ಮತ್ತು ಚಿಂತನಾವಿಧಾನಗಳು ಬರುವುದು ಎಲ್ಲಿಂದ?**

ಹತ್ತನೆಯ ಸಮಸ್ಯೆ, ಭಾವನೆಗಳು ಮತ್ತು ಚಿಂತನಾವಿಧಾನವನ್ನು ಕುರಿತದ್ದು. ನಮಗೆ ಭಾವನೆಗಳು (feelings) ಬರುವುದು ಎಲ್ಲಿಂದ? ಇವು ನಮ್ಮ ಮನಸ್ಸಿನ (mind) ಉತ್ಪನ್ನಗಳೇ ಅಥವಾ ಹೊರಗಿನ ಎಲ್ಲಿಂದಲಾದರೂ ಬರುತ್ತವೆಯೇ? ನಮ್ಮ ಆಲೋಚನಾವಿಧಾನಗಳನ್ನು ರೂಪಿಸುವ, ನಿಯಂತ್ರಿಸುವ, ಬದಲಾಯಿಸುವ ನಿಯಮಗಳು ಯಾವುವಾದರೂ ಇವೆಯೇ?

**ಚಿಂತನಾಶಕ್ತಿಯ ಇತಿಮಿತಿಗಳು**

ಹೀಗೆ ಹತ್ತು ಹಲವು ಪ್ರಶ್ನೆಗಳು ಮಾನವರ, ಎಂದರೆ ಚಿಂತಿಸುವ ಸ್ಥಿತಿಗೆ ಏರಿರುವ ಮಾನವರ ಮನಸ್ಸನ್ನು ಕಾಡುತ್ತಲೇ ಇವೆ. "ಚಿಂತಿಸುವ ಸ್ಥಿತಿಗೆ ಏರಿರುವ" ಎಂದು ಹೇಳಬೇಕಾಗಿರುವುದಕ್ಕೆ ಕಾರಣವೇನೆಂದರೆ ಈ ಸೃಷ್ಟಿಯಲ್ಲಿ ಬಹುಪಾಲು ಜನರು ಸಮಾಜವು ಈಗಿರುವ ಸ್ಥಿತಿಯಲ್ಲಿ, ತಮ್ಮ ಹೊಟ್ಟೆ ಬಟ್ಟೆಗಳಿಗಾಗಿ ನಿರಂತರವಾಗಿ ಹೋರಾಡಬೇಕಾಗಿ ಬಂದಿರುವುದರಿಂದ ಜೀವ, ಜಗತ್ತು, ಪರಲೋಕ, ಜನ್ಮಾಂತರ, ಮೋಕ್ಷ ಮುಂತಾದವುಗಳನ್ನು ಕುರಿತು ಯೋಚಿಸುವುದಕ್ಕೆ ಬೇಕಾದ ಕಾಲಾವಕಾಶವಾಗಲಿ, ಮನಃಸ್ಥಿತಿಯಾಗಲಿ ಅವರಿಗೆ ಇಲ್ಲ. ಮಾನವನ ಇತಿಹಾಸದಲ್ಲಿ, ಕಾಲದಿಂದ ಕಾಲಕ್ಕೆ, ಎಲ್ಲೋ ಕೆಲವರು ಮಾತ್ರ ಈ ವಿಷಯಗಳನ್ನು ಕುರಿತು ಚಿಂತನೆ ನಡೆಸಿದ್ದಾರೆ. ಹಾಗೆ ಚಿಂತಿಸಿದವರು ತಮತಮಗೆ ತೋರಿದ ಉತ್ತರಗಳನ್ನು ನೀಡಿದ್ದಾರೆ. ಅವರು ನೀಡಿದ ಉತ್ತರಗಳು ಆಯಾ ಕಾಲದ, ಮಾತ್ರವಲ್ಲದೆ ಆಯಾ

ವ್ಯಕ್ತಿಗಳ, ಚಿಂತನಾಶಕ್ತಿಯ ಇತಿಮಿತಿಗಳಿಂದ ಕೂಡಿವೆ. ಆ ಕಾಲಕ್ಕೆ ಹೊಸದಾಗಿ ತೋರಿದ ಅವು, ತಮ್ಮ ಪಾಲಿಗೆ ಸಮರ್ಪಕ ಎಂದು ಕಂಡ ಉತ್ತರಗಳು ಮತತತ್ತ್ವಗಳಾಗುತ್ತವೆ. ಅವು ಸರಿಯೆ ತಪ್ಪೆ, ಸಾರ್ವಕಾಲಿಕವಾಗಿ ಸರ್ವಸಮ್ಮತವಾಗಿ ಅವು ನಿಲ್ಲಬಲ್ಲವೆ ಎಂಬುದನ್ನು ನಿರ್ಣಯಿಸುವ ಶಕ್ತಿ ಆ ಮತದ ಅನುಯಾಯಿಗಳಿಗೆ ಇರುವುದಿಲ್ಲ. ಅವು ಹಾಗಿಲ್ಲ ಎಂದು ಹೇಳುವ ಧೈರ್ಯ ಆ ಮತವನ್ನು ಮೊದಲಿಗೆ ಒಪ್ಪಿದ ಅಥವಾ ವಿರೋಧಿಸಿದ ಜನರಿಗೆ ಇರುವುದಿಲ್ಲ. ಹೀಗಿದ್ದೂ ಅಂಥ ಅಭಿಪ್ರಾಯಗಳನ್ನು ಧೈರ್ಯವಾಗಿ ವಿರೋಧಿಸಿದ ಜನರು ಕ್ರೂರವಾಗಿ ಹಿಂಸೆಗೆ ಒಳಗಾದ, ಇಲ್ಲವೆ ಸಜೀವವಾಗಿ ದಹನವಾದ, ಇಲ್ಲವೇ ಬಹಿಷ್ಕಾರಕ್ಕೆ ಒಳಗಾದ ಬೇಕಾದಷ್ಟು ಉದಾಹರಣೆಗಳನ್ನು ಮಾನವತೆಯ ಇತಿಹಾಸ ದುದ್ದಕ್ಕೂ ಕಾಣಬಹುದು. ಆದ್ದರಿಂದ ತಕ್ಕಮಟ್ಟಿಗೆ ವಿಚಾರಶಕ್ತಿಯಿರುವವರೂ ಸಾವು, ದೈಹಿಕ ಹಿಂಸೆ, ಸಾಮಾಜಿಕ ಬಹಿಷ್ಕಾರ ಇವುಗಳಿಗೆ ಹೆದರಿ ಆ ಮತದ ತತ್ತ್ವಗಳನ್ನು, ಆಚರಣೆಗಳನ್ನು ಮೌನವಾಗಿ ಒಪ್ಪಿಕೊಂಡು ಬದುಕುತ್ತಾರೆ. ಒಂದು ಕಾಲಕ್ಕೆ ಜನರು ನಿಜ ಎಂದು ನಂಬಿದ್ದ ದೇವಾರಾಧನೆಯ ಅಥವಾ ಭೂತಾರಾಧನೆಯ ಆಚರಣೆಯ ಭಾಗವೂ ಕೂಡ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಮುಂತಾದವುಗಳನ್ನು ಕುರಿತ ಭಾವನೆಗಳಂತೆಯೇ ನಂಬಿಕೆಯ ಮೊತ್ತಗಳಾಗಿ, ವೈಜ್ಞಾನಿಕ ಮತ್ತು ವೈಚಾರಿಕ ಪರಿಶೀಲನೆಗೆ ಒಳಗಾದಾಗ ಮೂಢನಂಬಿಕೆಗಳ ರಾಶಿಯಾಗಿ ಕಂಡುಬರುತ್ತದೆ.

## ಧರ್ಮಜಿಜ್ಞಾಸೆ

ಮೇಲೆ ವಿಚಾರ ಮಾಡಿದ ತತ್ತ್ವಜಿಜ್ಞಾಸೆಯ ಹಲವು ಪ್ರಕಾರಗಳಲ್ಲಿ ದೇವರು, ಜೀವ/ಆತ್ಮ, ಜನ್ಮಾಂತರ, ಪಾಪ, ಪುಣ್ಯ ಮುಂತಾದವುಗಳ ಪ್ರಸ್ತಾಪ, ಅವುಗಳ ಕಲ್ಪನೆ ಈ ವಿಷಯಗಳಲ್ಲಿ ಬೇಕಾದಷ್ಟು ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿರುವುದು ಹೌದಷ್ಟೆ. ಆದರೆ ಒಂದು ವಿಷಯದ ಬಗ್ಗೆ ಎಲ್ಲ ಮತಗಳೂ, ಧರ್ಮಗಳು ಸಮಾನವಾದ ಒತ್ತು ನೀಡಿರುವುದು ಎದ್ದು ಕಾಣುತ್ತದೆ. ಅದು ಧರ್ಮದ ಅಗತ್ಯವನ್ನು ಕುರಿತದ್ದು. ದೇವರು ಹಲವರೆ, ಜೀವಕ್ಕೆ ಶಾಶ್ವತವಾದ ಸ್ವರ್ಗ ಅಥವಾ ನರಕವುಂಟೆ ಇತ್ಯಾದಿ ವಿಷಯಗಳಲ್ಲಿ ಬೇಕಾದಷ್ಟು ಭಿನ್ನಾಭಿಪ್ರಾಯಗಳುಂಟು. ಆದರೆ ಧರ್ಮವನ್ನು ಎತ್ತಿ ಹಿಡಿಯಬೇಕು, ಧಾರ್ಮಿಕವಾದ ರೀತಿಯಲ್ಲಿ ಬಾಳಬೇಕು ಎಂಬ ವಿಷಯದಲ್ಲಿ ಮಾತ್ರ ಎಲ್ಲ ಧರ್ಮಾನುಯಾಯಿಗಳಲ್ಲೂ ಏಕಾಭಿಪ್ರಾಯ ಉಂಟು. ಆಸ್ತಿಕರೂ, ನಾಸ್ತಿಕರೂ ಬದುಕಿಗೆ ಆಧಾರವಾದುದು ಧರ್ಮವೇ ಎಂಬ ಮಾತನ್ನು ಒಪ್ಪಿಕೊಂಡಿದ್ದಾರೆ.

ಯಾವುದು ನಮ್ಮನ್ನು ಬದುಕಿನಲ್ಲಿ ಎತ್ತಿ ನಿಲ್ಲಿಸುತ್ತದೆಯೋ, ಯಾವುದು ನಮ್ಮನ್ನು ಸದಾ ಕಾಪಾಡುತ್ತದೆಯೋ, ಆದ್ದರಿಂದ ಯಾವುದನ್ನು ಸದಾ ನಾವು ಕಾಪಾಡಬೇಕೋ ಅದು ಧರ್ಮ. ಧರ್ಮ ಎನ್ನುವುದಕ್ಕೆ ಅನೇಕ ಅರ್ಥಗಳಿವೆ. ಸಾಂಖ್ಯ ದರ್ಶನದಲ್ಲಿ ಅಂತಃಕರಣದ ವೃತ್ತಿವಿಶೇಷಕ್ಕೆ ಧರ್ಮವೆಂದು ಹೆಸರು; ಬೌದ್ಧ ದರ್ಶನದಲ್ಲಿ ಶುಭವಾದ ಚಿತ್ತವಾಸನೆ ಧರ್ಮವೆನ್ನಿಸಿಕೊಳ್ಳುತ್ತದೆ; ವೈಶೇಷಿಕ ದರ್ಶನದಲ್ಲಿ ವಿಹಿತ ಕ್ರಿಯಾಸಾಧ್ಯವಾದ ಪುರುಷಗುಣ ವಿಶೇಷವೇ ಧರ್ಮ. ಜೈನ ದರ್ಶನದಲ್ಲಿ ಇದು ಪುಣ್ಯಪುದ್ಗಲ. (ಪುರುಷನಲ್ಲಿ ಹರಿಯುವ ವಿಶೇಷ ಶಕ್ತಿಪ್ರವಾಹ)

ಮಾನವಜೀವಿಗಳಿಗೆ ಸಂಬಂಧಿಸಿದಂತೆ ಒಳ್ಳೆಯದನ್ನು ಮಾಡುವುದು ಧರ್ಮವೆಂದೂ, ಕೆಟ್ಟದ್ದನ್ನು ಮಾಡುವುದು ಅಧರ್ಮವೆಂದೂ ತಿಳಿದುಕೊಂಡರೆ ಸಾಕು. ಮಹಾಭಾರತದಲ್ಲಿ ಬರುವ ಈ ಶ್ಲೋಕಾರ್ಧ ಧರ್ಮ, ಅಧರ್ಮಗಳಿಗೆ ಸಂವಾದಿಯಾದ ಪುಣ್ಯ-ಪಾಪಗಳನ್ನು ತಿಳಿಸಿಕೊಡುತ್ತದೆ: **ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ** – *'ಪರೋಪಕಾರವೇ ಪುಣ್ಯ; ಪರಪೀಡೆಯೇ ಪಾಪ'*

ಮೀಮಾಂಸಕರು, ವ್ಯಾಸ ವಾಲ್ಮೀಕಿಗಳೂ ಜೈನರೂ ಬೌದ್ಧರೂ ಧರ್ಮವನ್ನು ಕುರಿತು ಏನು ಹೇಳಿದ್ದಾರೆ ಎಂಬುದರ ಸಮೀಕ್ಷೆ ನಡೆಸಿದ, ಸುಪ್ರಸಿದ್ಧ ವಿದ್ವಾಂಸ ದಿವಂಗತ ಶ್ರೀ ಎಸ್.ಕೆ. ರಾಮಚಂದ್ರರಾಯರು ತಮ್ಮ ಸಮೀಕ್ಷೆಯ ಸಾರವನ್ನು ಈ ಮಾತುಗಳಲ್ಲಿ ಹೇಳಿದ್ದಾರೆ: "ಧರ್ಮದ ಪರಿಕಲ್ಪನೆ ನಮ್ಮ ನಾಡಿನಲ್ಲಿ ಅನಾದಿ ಕಾಲದಿಂದ ಸಾರೋದ್ಧಾರವಾಗಿ ಬೆಳೆದು ಬಂದಿದೆ. ಸಿದ್ಧಾಂತಗಳ ವೈವಿಧ್ಯವಾಗಲಿ, ದರ್ಶನಗಳ ವೈಷಮ್ಯವಾಗಲಿ, ಮತಕ್ರಿಯೆಗಳ ಗೊಂದಲವಾಗಲಿ ಧರ್ಮದ ಸ್ವರೂಪವನ್ನಾಗಲಿ, ಪ್ರಯೋಜನವನ್ನಾಗಲಿ, ಅಗತ್ಯವನ್ನಾಗಲಿ ಅಲ್ಲಗಳೆದಿಲ್ಲ. ದರ್ಶನದ ವಿವರಗಳು ಬಹುಮಟ್ಟಿಗೆ ಚಿಂತನೆಗಳು, ವಿಚಾರಲಹರಿಗಳು. (ಇದಕ್ಕೆ ಬದಲಾಗಿ) ಬದುಕನ್ನು ತಿದ್ದುವ, ಸಾರ್ಥಕಗೊಳಿಸುವ ಕೆಲಸ ಧರ್ಮದ್ದು; ಇದು ಯಾವ ದರ್ಶನಕ್ಕೆ ತಾನೆ ಬೇಡ?"

### ಯಾವುದು ಧರ್ಮ?

**ಇ**ತರರನ್ನು ದ್ವೇಷಿಸುವಷ್ಟು ಧರ್ಮಭಾವನೆ ನಮ್ಮಲ್ಲಿದೆ. ಆದರೆ ಪರಸ್ಪರ ಪ್ರೀತಿಸುವಷ್ಟು ಇಲ್ಲ. *–ಸ್ವಿಫ್ಟ್*

**ಎ**ಲ್ಲ ಧರ್ಮಗಳನ್ನೂ ಸಹನೆಯಿಂದ ಕಾಣಬೇಕು, ಏಕೆಂದರೆ ಪ್ರತಿಯೊಬ್ಬ ಮಾನವನೂ ತನ್ನ ಸ್ವರ್ಗವನ್ನು ತನ್ನದೇ ರೀತಿಯಲ್ಲಿ ಕಂಡುಕೊಳ್ಳಬೇಕಾಗುತ್ತದೆ.

*–ಫ್ರೆಡ್ರಿಕ್ ದಿ. ಗ್ರೇಟ್*

**ಪ**ರಿಶುದ್ಧ ಧರ್ಮ ಮತ್ತು ಭಗವಂತನಲ್ಲಿ ನಿಷ್ಠಾವಂತನಾಗಿರುವುದು ಎಂದರೆ ಇದೇ: ತಂದೆಯಿಲ್ಲದ ಅನಾಥರನ್ನು ಮತ್ತು ವಿಧವೆಯರನ್ನು ಅವರು ಕಷ್ಟದಲ್ಲಿದ್ದಾಗ ಭೇಟಿ ಕೊಡುವುದು ಮತ್ತು ಹೊರಜಗತ್ತಿಗೆ ಕಾಣದಂತೆ ಜೀವಿಸುವುದು. *–ಹೊಸ ಒಡಂಬಡಿಕೆ (ಬೈಬಲ್)*

**ನ**ನ್ನ ಧರ್ಮದಲ್ಲಿ ಅದರದೇ ಆದ ತತ್ತ್ವ ಇರಕೂಡದು; ಅಲ್ಲಿರಬೇಕಾದ್ದು ಬರೀ ಪ್ರೀತಿ, **ಕಾವ್ಯ ಮತ್ತು ಸಂದೇಹ.**

*– ಸಿರಿಲ್ ಕೊನೊಲಿ*

**ಧ**ರ್ಮಕ್ಕಾಗಿ ಸಾಯುವುದು ಅದರಂತೆ ಸರ್ವಥಾ ನಡೆದುಕೊಳ್ಳುವುದಕ್ಕಿಂತಲೂ ಬಹಳ ಸುಲಭ. *–ಬೋರ್ಜಸ್*